## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 175/2025**

| | | | |
|---|---|---|---|
| ಸಾಕ್ಷಿದಾರರು | : | ಗೀತಾ | ಸಿ.ಡಬ್ಲ್ಯೂ : 4 |
| ಗಂಡನ ಹೆಸರು | : | ರಮೇಶ್ | ಪಿ.ಡಬ್ಲ್ಯೂ : 4 |
| ವಯಸ್ಸು | : | 38 ವರ್ಷ | |
| ವೃತ್ತಿ | : | ಗೃಹಿಣಿ | |
| ವಾಸ ಸ್ಥಳ | : | ಬನ್ನಂಗಾಡಿ ಗ್ರಾಮ | |

ಸಾಕ್ಷಿಯನ್ನು ದಿಃ 21.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಚಾಸಾ.1 ನನ್ನ ಗಂಡ. ಚಾಸಾ.2 ಮತ್ತು 3 ರವರು ನನ್ನ ಭಾವಂದಿರು. ದಿಃ 11.12.2024 ರಂದು ಚಾಸಾ.1 ರಿಂದ 3 ಹಾಗೂ ನಾನು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಸುಮಾರು 12.00 ರಿಂದ 12.30 ಗಂಟೆ ಸಮಯದಲ್ಲಿ ಅರಣ್ಯ ಇಲಾಖೆಯವರು ನಮ್ಮ ಜಮೀನಿನ ಬಳಿಗೆ ಬಂದರು. ಚಾಸಾ.1 ರವರು ಅರಣ್ಯ ಇಲಾಖೆ ಅಧಿಕಾರಿಗಳ ಬಳಿಗೆ ಹೋಗಿ ಏಕೆ ಬಂದಿರುತ್ತೀರಾ ಎಂದು ವಿಚಾರಿಸುತ್ತಿದ್ದರು. ಅರಣ್ಯ ಅಧಿಕಾರಿಗಳು ಗೋಮಾಳದಲ್ಲಿ ಮರ ಕಡಿದಿರುವುದಾಗಿ ಮನೋಹರ್ ಎಂಬುವವರು ದೂರು ನೀಡಿದ್ದಾರೆ ಆ ವಿಚವಾರವಾಗಿ ಗ್ರಾಮಕ್ಕೆ ಬಂದಿರುವುದಾಗಿ ತಿಳಿಸಿದರು. ಆಗ ಮೋಹನ್ ಎಂಬುವವರು ಸ್ಥಳಕ್ಕೆ ಬಂದರು. ಚಾಸಾ.1 ರವರು ಮೋಹನ್ ರವರನ್ನು

ಉದ್ದೇಶಿಸಿ ನಿಮ್ಮ ಅಪ್ಪ ದೂರು ನೀಡಿದ್ದಾರೆ ನೀವು ಎಲ್ಲಿಯೂ ಅಕ್ರಮವಾಗಿ ಮರ ಕಡಿದಿಲ್ಲವೆ ಎಂದು ಕೇಳಿದರು. ಮೋಹನ ಊರಿಗೆ ಹೋಗಿ ಶೃತಿರವರನ್ನು ಕರೆದುಕೊಂಡು ಬಂದು 1 ನೇ ಆರೋಪಿ ಶೃತಿ ಚಾಸಾ.1 ರವರನ್ನು ಉದ್ದೇಶಿಸಿ ನಿಮ್ಮ ಅಪ್ಪನ ಜಮೀನಿಗೆ ನಾವು ಬಂದಿದ್ದೀವಾ ಎಂದು ಜಗಳ ತೆಗೆದು ಚಾಸಾ.1 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡರು. ನಾನು ಮತ್ತು ಚಾಸಾ.6 ರವರು ಆ ಜಗಳವನ್ನು ಬಿಡಿಸಿದೆವು. ಆರೋಪಿಗಳು ಮತ್ತು ಚಾಸಾ.1 ರವರು ಊರ ಕಡೆ ಹೋದರು, ನಾವು ಕೆಲಸ ಮಾಡಲು ಜಮೀನಿನ ಕಡೆ ಹೋದರು.

2. 3 ನೇ ಆರೋಪಿ ದೇವರಾಜು ಚಾಸಾ.1 ರವರಿಗೆ ಕರೆ ಮಾಡಿ ಹೊಲದ ಬಳಿ ಎನೋ ಜಗಳವಾಗಿದೆಯೇ ಬನ್ನಿ ಮಾತನಾಡೋಣ ಎಂದು ಊರಿನಿಂದ ತೋಟದ ಬಳಿಗೆ ಕರೆಸಿಕೊಂಡರು. ಆಗ ಸಮಯ 1.30 ಗಂಟೆಯಾಗಿತ್ತು. ದೇವರಾಜು ಜೊತೆ ಎರಡು ಸ್ಕೂಟರಿನಲ್ಲಿ 4–5 ಜನ ಬಂದಿದ್ದರು, ಅವರು ಯಾರೆಂದು ನನಗೆ ಗೊತ್ತಿಲ್ಲ. ಮಾತನಾಡಬೇಕೆಂದು ಕರೆಸಿ ದೇವರಾಜು ಜಗಳ ಮಾಡಿದರು. ಪೈಪು ಮತ್ತು ದೊಣ್ಣೆಗಳಿಂದ ದೇವರಾಜುರವರು ಚಾಸಾ.1 ರವರಿಗೆ ಹೊಡೆದರು. ಬಿಡಿಸಲು ಹೋದ ನನ್ನ ಎಡಕೈಗೆ ಪೈಪು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದರು. ಮಾತಿಗೆ ಮಾತು ನಡೆದು ನೀವು ಮಜ್ಜಿಗೆಪುರಕ್ಕೆ ಬನ್ನಿ ನಿಮಗೆ ಒಂದು ಗತಿ ಕಾಣಿಸುತ್ತೇವೆಂದು ಹೇಳಿದರು. ನಂತರ ಕೆ ಆರ್ ಎಸ್ ಠಾಣೆಯಲ್ಲಿ ದೂರು ಕೊಟ್ಟೆವು. ಘಟನೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ

ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮುಮಾ.1 ರಿಂದ 3 ದೊಣ್ಣೆ ಮತ್ತು ಪೈಪು ಮತ್ತು ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದಮುಂರದಿವ 1 ಮತ್ತು 2 ನೇ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.3 ನೇ ಆರೋಪಿ ಗೈರು ಹಾಜರು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. 3 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ. ಸಾಕ್ಷಿ 3 ನೇ ಆರೋಪಿಯನ್ನು ಗುರುತಿಸಿದ್ದಾರೆಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

3. ನಾನು ಪ್ರಥಮ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ.5 ರಿಂದ 8 ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿ ಚಾಸಾ.6 ಮಾತ್ರ ನಮ್ಮ ಸಂಬಂಧಿಕರು ಉಳಿದವರು ಸಂಬಂಧಿಕರಲ್ಲ ಎಂದು ಹೇಳುತ್ತಾರೆ. ಚಾಸಾ.5 ರಿಂದ 8 ನಿಮ್ಮ ಸಂಬಂಧಿಕರಾಗಿದ್ದರು ಸಂಬಂಧಿಕರಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದೂರು ಕೊಡುವಾಗ ನಾನು ಚಾಸಾ.1 ರವರ ಜೊತೆಗೆ ಹೋಗಿರಲಿಲ್ಲ. ಘಟನೆ ನಡೆದ ದಿನವೇ ದೂರು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಅದು ಚಾಸಾ.1 ರವರಿಗೆ ಗೊತ್ತು ಎಂದು ಹೇಳುತ್ತಾರೆ. ನಾನು ಹೇಳಿಕೆ ನೀಡಿದ ವಿಚಾರಗಳನ್ನು ಪೊಲೀಸರು ಕೈ ಬರವಣಿಗೆಯಲ್ಲಿ ಬರೆದುಕೊಂಡರು. ಸಾಕ್ಷಿ ಸ್ವತಃ ಪೊಲೀಸರು ಪ್ರಶ್ನೆ ಮಾಡಿದಾಗ ಉತ್ತರ ಕೊಟ್ಟೆ ಎಂದು

ಹೇಳುತ್ತಾರೆ. ಪೊಲೀಸರು ಬರೆದುಕೊಂಡ ಹೇಳಿಕೆಯನ್ನು ನಾನು ಪುನಃ ಓದಿ ತಿಳಿದು ಕೊಂಡಿಲ್ಲ.

4. ನೀವು ಮತ್ತು ಚಾಸಾ. 1 ರಿಂದ 3 ರವರು ಕೆಲಸ ಮಾಡುತ್ತಿದ್ದ ಜಮೀನಿನ ಸರ್ವೆ ನಂಬರು ಮತ್ತು ವಿಸ್ತೀರ್ಣ ಗೊತ್ತಿದೆಯಾ ಎಂದರೆ ಸಾಕ್ಷಿ ಅದು ಗೊತ್ತಿಲ್ಲವೆಂದು ಹೇಳುತ್ತಾರೆ. ಗೋಮಾಳದ ಪಕ್ಕ ನಿಮ್ಮ ಜಮೀನು ಇರುವ ಬಗ್ಗೆ ಪೊಲೀಸರಿಗೆ ದಾಖಲೆ ನೀಡಿದೆಯಾ ಎಂದರೆ ಸಾಕ್ಷಿ ಚಾಸಾ.1 ರಿಂದ 3 ರವರಿಗೆ ಗೊತ್ತು ಎಂದು ಹೇಳುತ್ತಾರೆ. ಗೋಮಾಳದ ಪಕ್ಕ ಜಮೀನು ಇತ್ತು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ಸರ್ವೆ ನಂಃ 67 ಮತ್ತು 117 ಜಮೀನಿನಲ್ಲಿ ಮನೋಹರ್ ಮತ್ತು ಲೀಲಾವತಿ (1 ಮತ್ತು 2 ನೇ ಆರೋಪಿಗಳ ತಂದೆ ತಾಯಿ) ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಚಾಸಾ.1 ರಿಂದ 3 ರವರಿಗೆ ಗೊತ್ತು ಎಂದು ಹೇಳುತ್ತಾರೆ. ಸರ್ವೆ ನಂಃ 67 ತಮ್ಮ ಹೆಸರಿಗೆ ಮಂಜೂರು ಮಾಡಬೇಕೆಂದು ಲೀಲಾವತಿ ಅರ್ಜಿ ನೀಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಚಾಸಾ.1 ರಿಂದ 3 ರವರಿಗೆ ಗೊತ್ತು. ಗಲಾಟೆಯಾದ ವಿಚಾರ ಮಾತ್ರ ನಾನು ಹೇಳಿದ್ದೇನೆಂದು ಹೇಳುತ್ತಾರೆ.

5. ಮನೋಹರ ಎಂಬುವವರು ಚಾಸಾ.1 ರಿಂದ 8 ರವರ ವಿರುದ್ಧ ಮರ ಕಡಿದಿರುವುದಾಗಿ ದೂರು ನೀಡಿದ್ದಾರು ಎಂದರೆ ಸಾಕ್ಷಿ ಅರಣ್ಯ ಇಲಾಖೆಯವರು ಬಂದು ಹೇಳಿದ ನಂತರ

ನಮಗೆ ಗೊತ್ತಾಯಿತು ಎಂದು ಹೇಳುತ್ತಾರೆ. ಚಾಸಾ.2 ರವರ ಹೆಸರಿನಲ್ಲಿರುವ ಜಮೀನಿನ ದಾಖಲೆಗಳನ್ನು ಪೊಲೀಸರಿಗೆ ನೀಡಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನಮ್ಮ ಮನೆಯ ಗಂಡಸರಿಗೆ ಗೊತ್ತು ಎಂದು ಹೇಳುತ್ತಾರೆ. ಚಾಸಾ.1 ರಿಂದ 3 ಮತ್ತು ನೀವು ಆರೋಪಿಗಳ ವಿರುದ್ಧ ಹಲ್ಲೆ ಮಾಡಿರುವುದಾಗಿ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿ ನಾವು ದೂರು ನೀಡಿದ ನಂತರ ಅವರು ನೀಡಿದ್ದಾರಂದು ಹೇಳುತ್ತಾರೆ. ಆರೋಪಿಗಳೇ ನಿಮ್ಮ ವಿರುದ್ಧ ಮೊದಲು ದೂರು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಗಳು ನೀಡಿರುವ ದೂರಿನಿಂದ ತಪ್ಪಿಸಿಕೊಳ್ಳಲು ನೀವು ಸುಳ್ಳು ದೂರನ್ನು ಆರೋಪಿಗಳ ವಿರುದ್ಧ ನೀಡಿರುತ್ತೀರಾ ಎಂದರೆ ಸರಿಯಲ್ಲ.

6. ಗಲಾಟೆ ನಡೆಯಿತು ಎನ್ನಲಾದ ಸಮಯದಲ್ಲಿ ಆರೋಪಿಗಳ ಕಡೆಯವರು ಸ್ವಲ್ಪ ಜನರಿದ್ದರು ಹಾಗೂ ಜಮೀನಿನಲ್ಲಿ ಕೆಲಸ ಮಾಡುವವರು ಸ್ವಲ್ಪ ಜನರಿದ್ದರು. ಆ ಸಮಯದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಗಳ ಹೆಸರನ್ನು ನನಗೆ ಹೇಳಲಾಗುವುದಿಲ್ಲ. ಘಟನೆ ನಡೆಯಿತ ಎನ್ನಲಾದ ಸಮಯದಲ್ಲಿ ಆರೋಪಿ ಕಡೆಯವರು ಮತ್ತು ಜಮೀನಿನಲ್ಲಿ ಕೆಲಸ ಮಾಡುವವರು ಇದ್ದರು ಎಂದು ಹೇಳಿರುತ್ತೇನೆ. ಸ್ಥಳದಲ್ಲಿದ್ದವರನ್ನು ಪೊಲೀಸರು ಸಾಕ್ಷೀದಾರರನ್ನಾಗಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ.5 ರಿಂದ 9 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ನನಗೆ ನೋವಿನ

*ಗಾಯಗಳು ಆಗಿದ್ದವು, ರಕ್ತ ಬರುವ ಗಾಯಗಳು ಆಗಿರಲಿಲ್ಲ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿಲ್ಲ. ಮುಮಾ.1 ರಿಂದ 3 ರ ಮೇಲೆ ವಿಶೇಷ ಗುರುತು ಇಟ್ಟುಕೊಂಡಿಲ್ಲ. ಸಾಕ್ಷಿ ಮುಮಾ.3 ನಮ್ಮ ಮನೆಯವರದ್ದು, ಮುಮಾ.1 ಮತ್ತು 2 ನಮ್ಮ ಜಮೀನದ್ದು ಎಂದು ಹೇಳುತ್ತಾರೆ. ಮುಮಾ.1 ರಿಂದ 2 ನಮ್ಮ ಜಮೀನಿನವು ಎಂದು ಪೊಲೀಸರ ಮುಂದೆ ಹೇಳಿಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತ ಯಾವುದೇ ಕೃತ್ಯವನ್ನು ಆರೋಪಿಗಳು ಎಸಗಿಲ್ಲ ಎಂದರೆ ಸರಿಯಲ್ಲ. ಮುಮಾ.1 ರಿಂದ 3 ನ್ನು ನೀವು ಮತ್ತು ಚಾಸಾ.1 ರಿಂದ 3 ರವರು ಸೃಷ್ಟಿಸಿ ನೀಡಿರುತ್ತೀರಾ ಎಂದರೆ ಸರಿಯಲ್ಲ. 3 ನೇ ಆರೋಪಿ ಮತ್ತು ಇತರರು ಎರಡು ಸ್ಕೂಟರುಗಳಲ್ಲಿ ತೋಟದ ಬಳಿ ಬಂದ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೆನೋ ಇಲ್ಲವೋ ಜ್ಞಾಪಕ ಇಲ್ಲ. ಚಾಸಾ.3 ರವರು ಮನೋಹರ್ ರವರಿಗೆ ಜಮೀನಿನ ಸಂಬಂಧ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಹಾಗೂ ವ್ಯಾಜ್ಯ ನಡೆಯುತ್ತಿದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಈ ವಿಚಾರ ನಿಮಗೆ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸೇರಿರುವ ಜಮೀನನ್ನು ಲಪಟಾಯಿಸಬೇಕೆಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***